ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ರವರ ಕಛೇರಿ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು–570 017
www.cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಬೇಲೂರು.
ದೂ.ಸಂ. 08177–222223
E.Mail : aeehsnbelur@rediffmail.com

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಜೇ/2017-18/F-16/ 2326-27 ದಿನಾಂಕ : 4.01.2018

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 16.12.17 ರ ಶನಿವಾರದಂದು ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕ), ವೃತ್ತ ಕಛೇರಿ, ಚಾ.ವಿ.ಸ.ನಿ.ನಿ., ಹಾಸನ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;

1. ಶ್ರೀ ನಾರಾಯಣ ಬೋವಿ, ಕಾ. ಇಂ(ವಿ), ಸಕಲೇಶಪುರ ವಿಭಾಗ.
2. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ.
3. ಶ್ರೀ ತೋಟಪ್ಪ, ಲೆಕ್ಕಾಧಿಕಾರಿ(ಆಂ.ಪ), ಸಕಲೇಶಪುರ ವಿಭಾಗ.
4. ಶ್ರೀಮತಿ ಕವಿತಾ ಹೆಚ್. ಆರ್, ಸ.ಕಾ.ಇಂ(ವಿ), ಬೇಲೂರು ಉಪವಿಭಾಗ.
5. ಶ್ರೀ ಹರೀಶ್, ಸಹಾಯಕ ಇಂಜಿನಿಯರ್(ತಾಂ), ಬೇಲೂರು ಉಪವಿಭಾಗ
6. ಶ್ರೀ ಎನ್. ಡಿ. ಕುಮಾರ್, ಸಹಾಯಕ ಇಂಜಿನಿಯರ್(ವಿ), ಬೇಲೂರು ನಗರ ಶಾಖೆ.
7. ಶ್ರೀ ಚಿಕ್ಕವರದಯ್ಯ, ಕಿರಿಯ ಇಂಜಿನಿಯರ್(ವಿ), ಹಳೇಬೀಡು ಶಾಖೆ.
8. ಶ್ರೀ ಡಿ. ಸಂತೋಷ್ ಕುಮಾರ್, ಕಿರಿಯ ಇಂಜಿನಿಯರ್(ವಿ), ಹಗರೆ ಶಾಖೆ.
9. ಶ್ರಿ ಜಿ. ಶಶಿಕಿರಣ್, ಕಿರಿಯ ಇಂಜಿನಿಯರ್(ವಿ), ತೊಳಲು ಶಾಖೆ.
10. ಶ್ರಿ ಎಂ. ರೇವಣ್ಣ, ಕಿರಿಯ ಇಂಜಿನಿಯರ್(ವಿ), ಅರೇಹಳ್ಳಿ ಶಾಖೆ.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಬೆಳಿಗ್ಗೆ 11 : 00 ಘಂಟೆಗೆ ಪ್ರಾರಂಭ ಮಾಡಿದರು.**

---

### ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;

1. ಶ್ರೀ ಶಿವಕುಮಾರ್, ಮಧಘಟ್ಟ ರವರು ಗ್ರಾಮದ ಪರಿವರ್ತಕದ ಮೇಲೆ ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳು ಅಧಿಕವಾಗಿದ್ದು, ಈಗ ಮಾರ್ಗ ವಿಸ್ತರಣೆಯ ಅಗತ್ಯವಿದೆ ಎಂದು ಶಿವಕುಮಾರ್ ತಿಳಿಸಿದರು.

    ಅದಕ್ಕೆ ಅರೇಹಳ್ಳಿ ಶಾಖಾಧಿಕಾರಿಯವರು ಆ ಸ್ಥಳಕ್ಕೆ 8 ಕಂಬಗಳ ಅವಶ್ಯಕತೆ ಇರುವುದಾಗಿ ತಿಳಿಸುತ್ತಾ, UNIP ಯೋಜನೆಯಡಿಯಲ್ಲಿ ಒಟ್ಟು 3x25 KVA ಪರಿವರ್ತಕಗಳನ್ನು ಅಳವಡಿಸಲು ಅಂದಾಜು ಪಟ್ಟಿ ತಯಾರಿಸುವುದಾಗಿ ಸಭೆಗೆ ತಿಳಿಸಿದರು.

2. ಶ್ರೀ ಭದ್ರೇಗೌಡ ಎಂ. ಹೆಚ್., ತಲಗೋಡು ರವರು ತಲಗೋಡು ಕಾಲೋನಿಯಲ್ಲಿ ವೋಲ್ಟೇಜ್ ಸಮಸ್ಯೆ ಇರುವುದಾಗಿ ದೂರು ನೀಡಿರುತ್ತಾರೆ.

    ಅದರಂತೆಯೇ ಅಧಿಕ ಪರಿವರ್ತಕಕ್ಕೆ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಿದ್ದು, ಅದಕ್ಕೆ ಕಾರ್ಯಾದೇಶ ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಅವಾರ್ಡ್ ಆದ ನಂತರ ಕೆಲಸವನ್ನು ಪ್ರಾರಂಭಿಸುವುದಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ತಿಳಿಸಿದರು.

3. ಶ್ರೀ ತಿಮ್ಮೇಗೌಡ, ರಂಗನಾಥ ರೈಸ್ ಮಿಲ್, ಮುದಿಗೆರೆ ರವರು ತಮ್ಮ ರೈಸ್ ಮಿಲ್‌ಗೆ ಅಳವಡಿಸಿರುವ 100 ಕೆವಿಎ ಪರಿವರ್ತಕದಲ್ಲಿ ಹೆಚ್ಚುವರಿ ಸಂಪರ್ಕಿತ ಭಾರವಿದ್ದು, ಅನಧಿಕೃತ ಐ.ಪಿ. ಸ್ಥಾವರಕ್ಕೆ ಹೊಸದಾಗಿ ಸಂಪರ್ಕವನ್ನು ಪಡೆಯಲು ಪ್ರಯತ್ನಿಸುತ್ತಿರುವುದರ ಬಗ್ಗೆ ತಿಳಿಸಿರುತ್ತಾರೆ.

ಈ ಬಗ್ಗೆ ಸಭೆಯ ಅಧ್ಯಕ್ಷರು IPDS ಯೋಜನೆಯಡಿಯಲ್ಲಿ ಅಧಿಕ ಪರಿವರ್ತಕವನ್ನು ಅಳವಡಿಸುವುದಾಗಿ ತಿಳಿಸಿದರು.

4. ಶ್ರೀ ದೇವರಾಜು, ಹಳೇಬೀಡು ಹಾಗೂ ರಾಜಗೆರೆ ಗ್ರಾಮಸ್ಥರು ರಾಜಗೆರೆಯಲ್ಲಿರುವ 10 ಮನೆಗಳಿಗೆ ಐ.ಪಿ. ಸ್ಥಾವರಗಳಿಂದ ವಿದ್ಯುತ್ ಸಂಪರ್ಕವಿದ್ದು, ಎನ್.ಜೆ.ವೈ. ನಲ್ಲಿ ಸಂಪರ್ಕ ನೀಡಬೇಕಾಗಿ ಕೋರಿರುತ್ತಾರೆ.

ಆದರೆ ಎನ್.ಜೆ.ವೈ ನಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾದರೆ ಮಾರ್ಗ ವಿಸ್ತರಣೆಯನ್ನು ಸ್ವಯಂ ನಿರ್ವಹಣಾ ಕಾಮಗಾರಿ ಯೋಜನೆಯಡಿಯಲ್ಲಿ ನಿರ್ವಹಿಸಿಕೊಳ್ಳುವಂತೆ ಸಭೆಯ ಅಧ್ಯಕ್ಷರು ತಿಳಿಸಿದರು.

5. ಶ್ರೀ ಸಣ್ಣಯ್ಯ ಬಿನ್ ಗೌರಯ್ಯ, ಹೆಬ್ಬಾಳು ರವರು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗೆ ಅರ್ಜಿ ಸಲ್ಲಿಸಿದ್ದು, ಅದರ ಪ್ರಗತಿಯ ಬಗ್ಗೆ ವಿಚಾರಿಸಿದರು.

ಅದರಂತೆಯೇ ಲೇಬರ್ ಅವಾರ್ಡ್ ಅನ್ನು ಶೀಘ್ರದಲ್ಲಿಯೇ ನೀಡಿ ಕಾರ್ಯಗತಗೊಳಿಸುವುದಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ತಿಳಿಸಿದರು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 2:30 ಕ್ಕೆ ಮುಕ್ತಾಯಗೊಳಿಸಲಾಯಿತು.**

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ.
ಸೆಸ್ಕ್, ಬೇಲೂರು.

*ಯಥಾ ಪ್ರತಿಗಳನ್ನು :*

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಕಛೇರಿ ಪ್ರತಿ.